**ಶ್ರೀ ಪಿ.ಆರ್. ಸುಧಾಕರ್‌ಲಾಲ್:** ವೈಜ್ಞಾನಿಕವಾಗಿ ಮಾಡುವವರೆಗೂ ಅಲ್ಲಿ ಕಸ ಹಾಕುವುದನ್ನು ನಿಲ್ಲಿಸಲಿ.

(ಗೊಂದಲ)

**ಅಧ್ಯಕ್ಷರು:** ಮಾನ್ಯ ಸಚಿವರು ಪರಿಶೀಲನೆ ಮಾಡುತ್ತಾರೆ. ದಯವಿಟ್ಟು ಕುಳಿತುಕೊಳ್ಳಿ. ಇನ್ನೂ subject ಇವೆ. ಒಳ್ಳೆಯ ಕಥೆಯಾಯಿತಲ್ಲಾ.

(ಗೊಂದಲ)

(ಈ ಹಂತದಲ್ಲಿ ಬಿ.ಜೆ.ಪಿ ಸದಸ್ಯರಾದ ಮಾನ್ಯ ಬಿ.ಸುರೇಶಗೌಡ ಹಾಗೂ ಪಿ.ಆರ್.ಸುಧಾಕರ್‌ಲಾಲ್‌ರವರು ಸದನದ ಬಾವಿಗೆ ಬಂದರು.)

**ಶ್ರೀ ಎಸ್. ಸುರೇಶ್‌ಕುಮಾರ್:** ಮಾನ್ಯ ಸಚಿವರು ಬಹಳ ದೀರ್ಘವಾದ ಒಂದು ಉತ್ತರ ಕೊಟ್ಟಿದ್ದಾರೆ. ಆ ದೀರ್ಘವಾದ ಉತ್ತರದಲ್ಲಿ permission ತೆಗೆದುಕೊಳ್ಳುತ್ತಾ, ಸಮಸ್ಯೆ ಏನು ಬರುತ್ತಿದೆ ಎಂದರೆ, ಮಂಡೂರಿನದ್ದು ಆದಮೇಲೆ ಇಡೀ ರಾಜ್ಯದಲ್ಲಿ ಒಂದು ಆತಂಕದ ವಾತಾವರಣ ಇದೆ. ಅಜ್ಜಗೊಂಡಹಳ್ಳಿ ಇನ್ನೊಂದು ಮಂಡೂರು ಆಗಬಾರದು. ನಾವು ಏನು ಮಾಡುತ್ತಿದ್ದೇವೆ, ಕಸವನ್ನು ತೆಗೆದುಕೊಂಡು dump ಮಾಡುವುದರಲ್ಲಿ ಮುಗಿದುಹೋಗುತ್ತಿದೆ. ಆ Dumping yard ಮಾಡದೇ ನೀವು treatment ಮಾಡಿ ಅದರಿಂದ ಬರುವ waste ಗಾಗಿ treatment plant ಮಾಡಿ. ಇನ್ನೊಂದು ಅವರು 28 ದಿವಸದಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ಸರ್ಕಾರದವರು, ಅಧಿಕಾರಿಗಳು ಯಾರಾದರೂ ಅಲ್ಲಿ ಹೋಗಿ ಅವರಿಗೆ ಸಮಜಾಯಿಷಿ ಕೊಟ್ಟು ಆ ಆತಂಕವನ್ನು ದೂರ ಮಾಡುವಂತಹ ಕೆಲಸ ಮಾಡಿ.

**ಶ್ರೀ ವಿನಯಕುಮಾರ್ ಸೊರಕೆ:** ಪ್ರತಿಭಟನೆ ಮಾಡುವಂಥವರು ಇಲ್ಲಿಯೂ ಕೂಡ ಬಂದಿದ್ದರು. ನಾನು ನೇರವಾಗಿ ಹೋಗಿ ಅವರ ಜೊತೆ ಮಾತುಕತೆ ನಡೆಸಿದ್ದೇನೆ. ಅವರದ್ದೂ ಇರುವ ಬೇಡಿಕೆ ಏನೆಂದರೆ, segregate ಮಾಡಬೇಕು ನಂತರ ವೈಜ್ಞಾನಿಕವಾಗಿ ಮಾಡಬೇಕು ಎನ್ನುವುದು ಆಗಿದೆ.